ಶಿವಮೊಗ್ಗದಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವುದು

೨೫೬ (೫೬೦) ಶ್ರೀ ಡಿ.ಜಿ. ಬಸವನಗೌಡ (ಹೊನ್ನಾಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಶಿವಮೊಗ್ಗದಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಸರ್ಕಾರದವರು ಯೋಚಿಸಿದ್ದಾರೆಯೇ?

ಆ) ಮೇಲ್ಕಂಡ ಕಾಲೇಜನ್ನು ಪ್ರಾರಂಭಿಸುವಲ್ಲಿ ಸರ್ಕಾರದವರಿಗೆ ಇರುವ ಅನಾನುಕೂಲತೆಗಳೇನು?

ಇ) ಸಾರ್ವಜನಿಕರು ಮುಂದೆ ಬಂದಲ್ಲಿ ಪರವಾನಗಿ ಕೊಡಲಾಗುವುದೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಪರಿಶೀಲಿಸಲಾಗುವುದು.

ಶ್ರೀ ಡಿ. ಜಿ. ಬಸವನಗೌಡ.—ಶಿವಮೊಗ್ಗದಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವಲ್ಲಿ ಸರ್ಕಾರದವರಿಗೆ ಇರುವ ಅನಾನುಕೂಲಗಳೇನು ಎಂದು ನಾನು ಕೇಳಿರುವ ಪ್ರಶ್ನೆಗೆ '' ಈ ಪ್ರಶ್ನೆ ಉದ್ಭವಿಸುವುದಿಲ್ಲ '' ಎಂದು ಉತ್ತರ ನೀಡಿದ್ದೀರಿ. ಈ ಬೇಡಿಕೆ ಸುಮಾರು ೨೦-೨೫ ವರ್ಷದಿಂದಲೂ ಇದೆ. ಶಿವಮೊಗ್ಗಾದಲ್ಲಿ ಸಹ್ಯಾದ್ರಿ ಯೂನಿವರ್ಸಿಟಿ ಸ್ಥಾಪನೆ ಮಾಡಬೇಕು, ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕು ಮತ್ತು ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಬೇಕೆಂದು ಕೇಳುತ್ತಲೇ ಇದ್ದೇವೆ. ಆದರೆ ಇವುಗಳ ಪೈಕಿ ಒಂದೂ ಕೂಡ ಕಾರ್ಯಗತವಾಗಲಿಲ್ಲ. ಈಗ ಜನತಾ ಸರ್ಕಾರ ಶಿವಮೊಗ್ಗಾಕ್ಕೆ ಒಂದು ವೈದ್ಯಕೀಯ ಕಾಲೇಜನ್ನು ಕೊಟ್ಟರೆ ಇದರಿಂದ ಉತ್ತರ ಕನ್ನಡ ಜಿಲ್ಲೆ, ಶಿವಮೊಗ್ಗಾ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಈ ವೈದ್ಯಕೀಯ ಕಾಲೇಜನ್ನು ತೆರೆಯಲು ಬೇಕಾದ ಅನುಕೂಲಗಳನ್ನೆಲ್ಲಾ ನಾವು ಒದಗಿಸಿಕೊಡುತ್ತೇವೆ. ಹಿಂದೆ ಕೂಡ ಮೈಸೂರು ವಿಶ್ವವಿದ್ಯಾನಿಲಯದ ಏಂಡಿಕೇಟ್‌ನವರು ಶಿಫಾರಸು ಮಾಡಿ ಶಿವಮೊಗ್ಗಾದಲ್ಲಿ ವೈದ್ಯಕೀಯ ಕಾಲೇಜನ್ನು ತೆರೆಯಬಹುದೆಂದು ಹೇಳಿದ್ದಾರೆ.

ಶ್ರೀ ಎಂ. ರಘುಪತಿ.—ಸಾರ್ವಜನಿಕರು ಅನುಕೂಲಗಳನ್ನು ಒದಗಿಸಲು ಮುಂದೆ ಬಂದರೆ ಪರವಾನಗಿಯನ್ನು ಸರ್ಕಾರ ಕೊಡುವುದೆ ? ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ವಿಚಾರ ಸರ್ಕಾರದ ಯೋಚನೆಯಲ್ಲಿದ್ದರೆ ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಸರ್ಕಾರ ಕೇವಲ ಯೋಚನೆ ಮಾಡುವುದೇ ಅಲ್ಲ, ವಿಶ್ವವಿದ್ಯಾನಿಲಯಗಳು ಸ್ವಾಯತ್ತ ಸಂಸ್ಥೆಗಳು. ಅವರು ಶಿಫಾರಸು ಮಾಡಿದ್ದಕ್ಕೆ ಬೆಲೆ ಕೊಡತಕ್ಕವರು ಎಂದರೆ ಸರ್ಕಾರದವರು. ಶಿವಮೊಗ್ಗಾದಲ್ಲಿ ವೈದ್ಯಕೀಯ ಕಾಲೇಜನ್ನು ತೆರೆಯಲು ಅನುಕೂಲವಿದೆ, ಆದ್ದರಿಂದ ಅಲ್ಲಿ ತೆರೆಯಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದವರು ಶಿಫಾರಸು ಮಾಡಿದ್ದಾರೆ. ತಾವು ಕೇವಲ ಪುನ್ನಣೆ ಮಾತ್ರ ಕೊಡಬೇಕು ಅಷ್ಟೆ. ಇದನ್ನು ಆದ್ಯತೆಯ ಮೇರೆಗೆ ಪರವಾನಗಿ ಕೊಡುತ್ತಿರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಂ. ರಘುಪತಿ.— ಸ್ಪಷ್ಟವಾಗಿ ಹೇಳಬೇಕಾದರೆ ೪ ಖಾಸಗೀ ಕಾಲೇಜುಗಳಿಗೆ ಮೈಸೂರು ವಿಶ್ವವಿದ್ಯಾನಿಲಯದವರು ಶಿಫಾರಸು ಮಾಡಿದ್ದಾರೆ.....

ಶ್ರೀ ಪಟಮಕ್ಕಿ ರತ್ನಾಕರ್.—ಸ್ವಾಮಿ, ವೈದ್ಯಕೀಯ ಕಾಲೇಜು, ಕೃಷಿ ಕಾಲೇಜು ಅರಣ್ಯ ಕಾಲೇಜು ಮತ್ತು ಸಹ್ಯಾದ್ರಿ ಯೂನಿವರ್ಸಿಟಿಯನ್ನು ಕೊಡಬೇಕೆಂದು ಕೇಳುತ್ತಲೇ ಬಂದಿದ್ದೇವೆ. ಹೋಗಲಿ, ಈ ೪ರ ಪೈಕಿ ಯಾವುದಾದರೂ ಒಂದನ್ನಾದರೂ ಕೊಡಿ. ಅದರಲ್ಲೂ ನಮಗೆ ವೈದ್ಯಕೀಯ ಕಾಲೇಜನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೆ ಇದು ಪಕ್ಷಾತೀತವಾದ ಪ್ರಶ್ನೆ. ಆದ್ದರಿಂದ ಮಾನ್ಯ ಸಚಿವರು ದಯವಿಟ್ಟು ನಮಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಇದು ಒಂದು ಸರ್ಕಾರದ ನೀತಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಆದ್ದರಿಂದ ತಾವು ಹೇಳತಕ್ಕಂಥ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ೧೯೮೬ ರಿಂದ ಪ್ರಾರಂಭ ಮಾಡಬೇಕೆಂದು ಯೋಜನೆಗಳು ಆಗಿದ್ದು, ಅದನ್ನು ಮಾಡುತ್ತೇವೆಂದೂ ಕೂಡ ಹೇಳಿದ್ದೇವೆ. ಮಂಗಳೂರು ಮತ್ತು ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಅನುದಾನ ಪಡೆದ ತಕ್ಷಣವೇ ಇದನ್ನು ಪ್ರಾರಂಭ ಮಾಡಲಿಕ್ಕೆ ವಿಪ್ರಾಡು ಮಾಡುತ್ತೇನೆಂದು ಹೇಳುತ್ತೇನೆ.

ಗದಗ್ ಕ್ಷೇತ್ರದಲ್ಲಿ ಎನ್. ಆರ್. ಡಬ್ಲ್ಯೂ. ಎಸ್. ಯೋಜನೆಗಳು

೨೩೭ (೨೭) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ:—

ಅ) ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯಡಿಯಲ್ಲಿ ಸರ್ಕಾರದಲ್ಲಿ ಬಾಕಿ ಇರುವ ಪ್ರಸ್ತಾವನೆಗಳ ಸಂಖ್ಯೆ ಮತ್ತು ಯಾವಾಗಿನಿಂದ ಬಾಕಿ ಇರುತ್ತೆ ?

ಆ). ಯೋಜನೆಗಳನ್ನು ಪೂರ್ಣಗೊಳಿಸಲು ತೆಗೆದುಕೊಳ್ಳಲಾದ ಕ್ರಮಗಳು ?

ಇ) ಅನೇಕ ದೊಡ್ಡ ಹಳ್ಳಿಗಳಾದ ಹೊಂಬಳ್, ಲಿಂಗದಾಳ ಕನಗಿನ ಹಾಳ್ ಮತ್ತು ಹರಲಾಪುರ ಗ್ರಾಮಗಳಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ತೆಗೆದುಕೊಳ್ಳಲಾದ ಕ್ರಮಗಳು ?

ಉ) ಚಿಕ್ಕ ಹಂದಿಗೋಳ್, ಹೊಂಬಾಳ್ ಗ್ರಾಮಕ್ಕೆ ನಳದ ಯೋಜನೆಯನ್ನು ಅನಷ್ಟಾನಕ್ಕೆ ತರುವ ಬಗ್ಗೆ ವಿಳಂಬವಾಗಲು ಕಾರಣವೇನು ? ಮತ್ತು ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್.—(ಗ್ರಾಮೀಣಾಭಿವೃದ್ಧಿ, ಮತ್ತು ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ಆರು (೬) ೨ ಫೆಬ್ರುವರಿ ೮೫ ೧ ಎಪ್ರಿಲ್ ೮೫
೨ ಮೇ ೧೯೮೫ ೧ ಜೂನ್ ೧೯೮೫

ಆ) ಮಂಜೂರಾತಿ ನೀಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮಂಜೂರಾದ ನಂತರ ಪೂರ್ಣಗೊಳಿಸಲಾಗುತ್ತದೆ.

ಇ) ಗಮನಕ್ಕೆ ಬಂದಿದೆ.

ಈ) ೧) ಹೊಂಬಾಳ್ ಗ್ರಾಮಕ್ಕೆ ಈಗಾಗಲೇ ೧೫ ಕೊಳವೆಬಾವಿಗಳನ್ನು ಹಾಕಲಾಗಿದ್ದು, ಅವುಗಳಲ್ಲಿ ೧೦ ಯಶಸ್ವಿಯಾಗಿವೆ ಒಕ್ಕೆ ಕೈ ಪಂಪುಗಳನ್ನು ಜೋಡಿಸಲಾಗಿದೆ ಇನ್ನುಳಿದ ಬಾವಿಗಳಲ್ಲಿ ಹೆಚ್ಚಿನ ಪ್ರಮಾಣದ ನೀರು ದೊರೆತುದರಿಂದ ಅವುಗಳನ್ನು ನಳದ ಯೋಜನೆಗೆ ಅಳವಡಿಸಿಕೊಳ್ಳಲಾಗುವುದು.

೨) ಲಿಂಗದಾಳ ಗ್ರಾಮಕ್ಕೆ ಈಗಾಗಲೇ ೮ ಕೊಳವೆ ಬಾವಿಗಳನ್ನು ಹಾಕಲಾಗಿದ್ದು. ಅವುಗಳಲ್ಲಿ ೫ ಯಶಸ್ವಿಯಾಗಿವೆಯಾದರೂ ಮೂರರಲ್ಲಿ ಉಪ್ಪುನೀರು ದೊರೆತಿದೆ, ಇನ್ನುಳಿದ ಎರಡು ಬಾವಿಗಳು ಗ್ರಾಮದಿಂದ ದೂರವಿದ್ದು, ಓಳ್ಳೆಯ ನೀರು ದೊರಕಿದ್ದುದರಿಂದ ಅವುಗಳನ್ನು ನಳದ ಯೋಜನೆಗೆ ಅಳವಡಿಸಿಕೊಳ್ಳಲಾಗುತ್ತಿದೆ.